ಮೈಸೂರ ಗೆಜೆಟ್.

ನಂ. 12 | ಸರ್ಕಾರದಿಂದ ಘಾಯಿಷ್ ಆದ್ದು. | ಸ್ 1887

ಬೆಂಗಳೂರು, ಶನಿವಾರ, ಮಾರ್ಚೀ ತಾ॥ 26, ಸ್ 1887.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ದಿವಾಣರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜ್‌ಯವರು, ಸರ್ವೆ ವ ಇನಾಂ ಸೂಪರ್‌ಟೆಂಡೆಂಟರು, ಕಾಂಪ್ಟೊಲರವರು, ಪಬ್ಲಿಕ್ ವರ್ಕ್ಸ್ ಆಫೀಸರ್‌ಗಳು, ಫಾರೆಸ್ಟು ಇನ್‌ಸ್ಪೆಕ್ಟರ್ ಜನರಲ್‌ಯವರು, ರಿಜಿಸ್ಟ್ರೇರ್ಷ ಇನ್‌ಸ್ಪೆಕ್ಟರ್ ಜನರಲ್ಲವರು, ಅಂಚೆ ಬಕ್ಷೀರು, ಮ್ಯುನಿಸಿಪೆಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜ್‌ರು, ಡಿ॥ ಡೆಪ್ಯುಟೆ ಕಮ್ಮಿಷನರುಗಳು, ಸಬ್‌ಆರ್ಡಿನೇಟ್ ಜಡ್ಜ್‌ರು, ಪೊಲೀಸ್ ಸೂಪರ್‌ಟೆಂಡೆಂಟರು, ಫಾರೆಸ್ಟು ಆಫೀಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫೀಸ್ ನೋಟೀಸ್‌ಗಳು.

3ನೇ ಭಾಗ–ಶ್ರೀಮ್ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟಆಕ್ಟುಗಳು ವ ರೆಗ್ಯುಲೇರ್ಷಗಳು, 1887ನೇ ಇಸವಿಯ 1ನೇ ನಂ. ರೆಗ್ಯುಲೇರ್ಷ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲ.

1ನೇ ಭಾಗ.

ತಾರೀಖು 3ನೇ ಮಾರ್ಚೀ 1887.

ಕ್ಯಾಂಪ್ ನಂ. 1652.—1870ನೇ ಇಸವಿ Xನೇ ನಂಬರ್ ಲ್ಯಾಂಡ್ ಅಕ್ವಿಜಿಷ್ಷ ಆಕ್ಟಿನ 6ನೇ ಸೆಕ್ಷರ್ಷ ಅನುಸರಿಸಿ ಇದರ ದಶೆಯಿಂದ ತಿಳಿಸುವದೇನಂದರೆ, ಇದರಡೀ ಕಂಡ ಜಮೀನು ಸರ್ಕಾರ್ ಕೆಲಸಕ್ಕೆ ಅಂದರೆ ಮಾದಿಗರ ಮನೆಗಳು ಕಟ್ಟುತಕ್ಕ ಬಗ್ಯೆ ಬೇಕಾಗಿರುತ್ತೆ:—

ತಾಲ್ಲೂಕು.	ಗ್ರಾಮ.	ಸರ್ವೇನಂಬರ್.	ಬೇಕಾಗಿರುವ ವಿಸ್ತೀರ್ಣ. ಯೆ. ಗುಂ. ಗ.	ಕಂದಾಯ. ರೂ. ಆ. ಪೈ.
ತುಮಕೂರು	ತುಮಕೂರು	289	3 35 0	3 8 0

ತಾರೀಖು 3ನೇ ಮಾರ್ಚೀ 1887.

ನಂ 256.—ಸಕಲಜನಗಳಿಗೂ ತಿಳಿಯುವ ಬಗ್ಯೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡೀ ಕಂಡ ತಖ್ತೀಯಲ್ಲಿ ನಮೂದಿಸಿದ ಪ್ರಕಾರ) ಜೋಡೀದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಫ್ತೀ ಮಾಡಲ್ಪಟ್ಟಿರುವ ಈಕೆಳಗೆಕಂಡ ಜೋಡೀ ಗ್ರಾಮಗಳು ಇದರಡೀಕಂಡ ತಖ್ತೀಯಲ್ಲಿ ನಮೂದಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳ್ಗೆ 11 ಘಂಟೆಗೆ ಹರಾಜು ಶುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮಗಳು ಚಡ ದರಖಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು, ಒಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ಏರ್ಪಡಿಸಲ್ಪಟ್ಟಿದ್ದರೆ, ಡೆಪ್ಯುಟೆ ಕಮ್ಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜ್ ಹಾಕಿಸುವರು.

3. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗ ಪೈಕೀ ಶೇಕಡಾ 25 ರಂತಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ ಪೈಕೀ ಬಾಕೀಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತೀ ಮಾಡದೇ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೇ ಹೋದರೆ, ಅಥವಾ ಬಾಕೀ ಕ್ರಯದ ಮೊಬಲಗನ್ನು ಪಾವತೀ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳೆ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಕ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ತ್ಯಸ್ಥರಿದ ರುಜೂ ಮಾಡುಲ್ಪಟ್ಟ ಬರವಣಿಗೇ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕು ಇಟೆಂಬ ಇತರ ಯಾವ ಮನುಷ್ಯನಾಗಲಿ, ಬಡ್ತೀ ಯಾ ಇತರ ಖರ್ಚುಗಳು ದೇಖೀಲ್ ಕಂದಾಯದ ಬಾಕೀ ಮೊಬಲಗನ್ನು ಪೂರಾ ಹಾಜರ್ ಮಾಡಿದರೆ, ಹರಾಜು ಮುವ್ಕೂಫ್ ಮಾಡಲ್ಪಡತಕ್ಕದ್ದು. ಪರಂತು ಹರಾಜಿಗೆ ಗೊತ್ತಾದ ದಿನಕ್ಕೆ ಹಿಂದಿನ ದಿನದ ಸೂರ್ಯಾಸ್ತಮಯಕ್ಕೆ ಮುಂಚಿತವಾಗಿ ಸದರೀ ಹಣ ಹಾಜರ್ ಮಾಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜು ಕಾಯಮಾದ್ದಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತೀ ಮಾಡಿ, ಹರಾಜನ್ನು ದಿವಾನರವರು ಖಾಯಂ ಮಾಡಿದ ಕೂಡ್ಲೆ ಗ್ರಾಮವು ಅತನ ಸುಫರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡಿಪ್ಯೂಟಿ ಕಮ್ಮಿಷನರವರಿಂದ ರುಜೂ ಮೊಹರ್ ಮಾಡೋಣಾದ ಒಂದು ಸರಟಿಫಿಕೇಟ್ ಅತನಿಗೆ ಕೊಡಲ್ಪಡುವದು. ತಪಶೀಲ್‌ನಲ್ಲಾಗಲಿ ಅಂದಾಜಾ ಬೀಜವರಿ ವಿಷಯದಲ್ಲಾಗಲಿ ಇರುವ ಗಲ್ಲತಗಳಿಗೆ ಸರ್ಕಾರದವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾ ಪಟ್ಟಂತೆ ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂಥಾ ಅಪ್ಪೀಲ್‌ನಲ್ಲಿ ಆಗುವ ಆಖೈರ್ ಹುಕ್ಕುಮಿಗೆ ಸದರೀ ಕ್ರಯವು ಒಳಪಟ್ಟು ಯಿರುತ್ತೆ.

ತಿಪ್ಪಟೂರು.	ಕಾಲ್ಲೂರು.	ಹೊಳಲಿ.	ಗ್ರಾಮ.	ಜೋಡೀದಾರರ ಹೆಸರು.	ಅಂದಾಜಾ ಬೀಜವರೀ.	ಅಂದಾಜಾ ಹುಟ್ಟುವಳೀ ಯಾ ಬೇರೀಜು.	ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಕ್ವಿಟ್‌ರೆಂಟ್.	ಯಾವಬಾಕೀಗೋಸ್ಕರ ಗ್ರಾಮಗಳು ಹರಾಜ್ ಮಾಡಲ್ಪಡುವೋ ಅಂಥಾ ಸರಕಾರದ ಕಂದಾಯದ ಬಾಕೀ.	ಹರಾಜು ತಾರೀಖು ವಗೈರೆ.
					ಖಂ. ಕೂ. ಪ.	ರೂ. ಅ. ಪೈ.	ರೂ. ಅ. ಪೈ.	ರೂ. ಅ. ಪೈ.	
ಕಸಬೂರು.	ಚಿಕ್ಕನಾಯಕನಹಳ್ಳಿ ತಾ.	ಸ್ಟಾ.	ಕೂದವಳ್ಳಿ ಅಗ್ರಾಹಾರ	ಪುರಾಣೀಕ ರಾಮಣ್ಣ, ಇತರ 46 ಮಂದಿ.	88 7 8	334 2 8	246 0 0		ಮುಂದಿನ ತಿಂಗಳು 15ನೇ ನಂಬರು ಮನೆಲೀ ಅಲ್ಲದೆ ಲಿಸ್ಟೆಂಟ್ ಕಮ್ಮಿಷನರವರ ಕಛೇರಿಯಲ್ಲಿ ಕಾಲ್ಲೂರು ಕಛೇರಿಯಲ್ಲಿ ಲಿಸ್ಟೆಂಟ್ ಕಮ್ಮಿಷನರವರ

ತಾರೀಖು 16ನೇ ಮಾರ್ಚೀ 1887.

ನಂ. 260.—ಕಾಶಿಯಾತ್ರೆ ಹೋಗತಕ್ಕ ಜನಗಳಿಗೆ ಇದರಿಂದ ಯಚ್ಚರಿಸುವದೇನಂದರೆ, ಕಾಶಿಯಲ್ಲಿ ಅಪಾಯಕರವಾದ ಮಾರಿ ಕಾ ಉಪದ್ರವ ವ್ಯಾಪಿಸಿರುವದಾಗಿ ಸದರೀ ಸ್ಥಳದ ಕಲೆಕ್ಟರ್ ವ ಡಿಸ್ಟ್ರಿಕ್ಟು ಮಾಜಿಸ್ಟ್ರೇಟರಿಂದ ತಿಳಿಯಬಂದಿರುತ್ತೆ.

ತಾರೀಖು 15ನೇ ಮಾರ್ಚೀ 1887.

ಕ್ಯಾಂಪ್ ನಂಬರ್ 1959.—ಇನಾಂ ಗ್ರಾಮಗಳ ಹಿಡುವಳೀದಾರರು, ಆವರ ಗ್ರಾಮಗಳ ಕ್ರಮವಾದ ರವಿನ್ಯೂ ಲೆಕ್ಕಗಳನ್ನು ಇಡುವದಕ್ಕೆ ತಪ್ಪಿರುವ ಸಂದರ್ಭಗಳು ಜಾಹಿರಾತಿಗೆ ಬಂದಿರುವದರಿಂದ ದಿರ್ವಾರವರು ಹುಕುಂ ಮಾಡುವದೇನಂದರೆ, ಇನಾಂದಾರರು ಮತ್ತು ಅವರ ಶ್ಯಾನುಭೋಗರು ಅವರ ಗ್ರಾಮಗಳ ಸಾಲೀಯಾನಾ ಸಾಗುವಳಿ ವ ಕಂದಾಯದ ಕ್ರಮವಾದ ಮತ್ತು ಕರಾರ್‌ವಾಕಾ ಲೆಕ್ಕಗಳನ್ನು ಇಡುವದಕ್ಕೆ ಬದ್ಧರಾಗಿರುತ್ತಾರೆಂಬದಾಗಿ ವಿಧಿಸುವ ಲೇಟ್ ಜೀಫ್ ಕಮ್ಮಿಷನರವರಿಂದ ಸಾದರ್ಮಾಡಲ್ಪಟ್ಟ 1843ನೇ ಇಸವಿ ಆಕ್ಟೋಬರ್ 25ನೇ ಮರ್ಕುಮಿನ ಇಸ್ತಿಹಾರ್‌ನಾಮೆಯ 3ನೇ ಕಲಮಿಗೆ ನಿಗೇ ಕೊಡತಕ್ಕದ್ದೆಂದು ಇನಾಂ ಗ್ರಾಮಗಳ ಹಿಡುವಳೀದಾರರು ಎಚ್ಚರಿಸಲ್ಪಡತಕ್ಕದ್ದು. ಈ ಷರತ್ತು ಕೇವಲ ಮುಖ್ಯವಾದದ್ದೆಂದು ಗವರ್ಣಮೆಂಟಿನವರು ಭಾವಿಸುವದರಿಂದ ತಮಾಂ ರೆವಿನ್ಯೂ ಆಫಿಸರ್‌ಗಳೂ ಇದನ್ನು ಜಾರಿಯಲ್ಲಿ ತರತಕ್ಕದ್ದೆಂದು ನಿಯಮಿಸಲ್ಪಟ್ಟಿರುತ್ತಾರೆ.

2. ರೆವಿನ್ಯೂ ಸರ್ವೆ ಲೆಕ್ಕಗಳ ಪೈಕಿ ಸರ್ಕಾರ್ ಗ್ರಾಮಗಳಿಗೋಸ್ಕರ ವಿಧಿಸಲ್ಪಟ್ಟ 2 ವ 3ನೇ ನಮೂನೆ ಖಿರದಿ ಮತ್ತು ಖಾತೆ ಲೆಕ್ಕಗಳು ವಿಶೇಷ ಮುಖ್ಯವಾದವು, ಅವುಗಳನ್ನ ಪೂರಾ ಗ್ರಾಮದ ಪ್ರತಿ ಇನಾಂದಾರನೂ ಕ್ರಮವಾಗಿ ಇಡಬೇಕಾಗಿರುತ್ತೆ. ಈ ಭಾಗದಲ್ಲಿ ಇನಾಂದಾರನು ಉಪೇಕ್ಷಿಸಿದರೆ ಸದರೀಯವನ ಖರ್ಚಿಗೆ ಬಳಪಟ್ಟು ಸರ್ಕಾರದವರು ಅವುಗಳನ್ನ ತಯಾರ್ಮಾಡಿಸುವದು ಅವಶ್ಯಕವಾಗಿರುತ್ತೆ.

ಕ್ಯಾಂಪ್ ನಂ. 1985.—ಅತ್ಯಂತ ಧಯಶಾಲಿಯಾದ ಸಾಮ್ರಾಜ್ಯವನ್ನು ಪಡೆದ ಮಹಾರಾಜ್ಞಿ ಚಕ್ರವರ್ತಿನಿಯವರ ಆಳ್ವಿಕೆಯ 50ನೇ ವರುಷದ ವರ್ಧಂತಿಯ ಶುಭ ಸಂದರ್ಭದಲ್ಲಿ ಖುಲಾಸ್ ಮಾಡಲ್ಪಟ್ಟ ಖೈದಿಗಳು ಅವರಿಗೆ ಜಾಸ್ತಿ ದಂಡನೆಯಾಗಿ. ವಿಧಿಸಲ್ಪಟ್ಟಿರಬಹುದಾದ ಯಾವ ಜುರ್ಮಾನೆ ವಸೂಲಿ ವಿಷಯದಲ್ಲಾಗಲಿ ಯಾವ ವಿಧವಾಗಿಯಾದರೂ ನಿರ್ಬಂಧ ಪಡಿಸಲ್ಪಡಕೂಡದು. ಅಂಥಾ ಜುರ್ಮಾನೆ ವಸೂಲಿ ವಿಷಯದಲ್ಲಿ ಜಾರಿ ಆಗದೆ ಬಾಕಿ ಇರುವ ಯಾವದದಾದರೂ ವಾರಂಟುಗಳು, ಅವುಗಳು ಸಾದರ್ಮಾಡಲ್ಪಟ್ಟಿಂಥಾ ಕೋರ್ಟುಗಳಿಗೆ ಈ ಇಸ್ತಿಹಾರ್‌ನಾಮೆಯ ದಾಖಲೆ ಪಡಾನಿಕಿ ವಾಪಸ್ ಮಾಡಲ್ಪಡತಕ್ಕದ್ದು.

ತಾರೀಖು 10ನೇ ಮಾರ್ಚ 1887.

ಕ್ಯಾಂಪ್ ನಂ. 1874.—ಕಾಫಿ ಸಾಗುವಳಿ ಬಗ್ಯೆ 1885ನೇ ಇಸವಿ ಮಾರ್ಚೀ 24ನೇ ಮರ್ಕುಂ 242ನೇ ನಂಬರ್ ಇಸ್ತಿಹಾರ್‌ನಾಮೆಯ 9ನೇ ಕಲಂ ಅನುಸರಿಸಿ ಸರ್ಕಾರ್ ಬಂಜರ್ ಜಮೀನುಗಳನ್ನು ಕೊಡುವ ವಿಷಯದಲ್ಲಿ ಇದರಡಿ ಕಂಡ ರೂಲ್ಸ್‌ಯಾನೆ ನಿಬಂಧನೆಗಳು ಸರ್ವರ ತಿಳುವಳಿಕೆ ಮತ್ತು ನಡವಳಿಕೆ ಬಗ್ಯೆ ಪ್ರಕಟಿಸಲ್ಪಡುತ್ತೆ:—

I. ಕಾಫಿ ಸಾಗುವಳಿ ಬಗ್ಯೆ ಜಮೀನಿಗೋಸ್ಕರ ದರಖಾಸ್ತುಗಳು ಪ್ರಥಮತಃ ಅಮಲ್‌ದಾರ್ಲಲ್ಲಿ ಕೊಡಲ್ಪಡತಕ್ಕದ್ದು; ಮತ್ತು ಸದರೀ ದರಖಾಸ್ತಿನಲ್ಲಿ ಡಿಟೋ ಜಮೀನ್ ಇರತಕ್ಕ ಹೋಬಳಿ ಗ್ರಾಮ ವ ಅದರ ಬೀಜವರಿ ಮತ್ತು ಸರ್ವೆ ನಂಬರು ಸುದಾ ವಿವರಿಸತಕ್ಕದ್ದು.

II. ದರಖಾಸ್ತು ಮಾಡಲ್ಪಟ್ಟ ಜಮೀನು 50 ಎಕರೆಗಳಿಗಿಂತ ಜಾಸ್ತಿಯಾಗಿ ಇರುವ ಪಕ್ಷದಲ್ಲಿ, ಒಬ್ಬ ಮೇಲ್ಪಟ್ಟ ರೆವಿನ್ಯೂ ಆಫಿಸರರಿಂದಲೂ ಮತ್ತು ಸದರೀ ಜಮೀನು ಹೆಚ್ಚು ಕ್ರಯ ಬಾಳುವ ಜಂಗಲ್ ಪ್ರದೇಶಗಳಲ್ಲಿ ಇರುವ ಪಕ್ಷದಲ್ಲಿ ಫಾರೆಸ್ಟ್ ಆಫೀಸರರಿಂದಲೂ ನೋಡಿ ತನಿಖೆ ಮಾಡಲ್ಪಡತಕ್ಕದ್ದು.

III. ಯಲ್ಲಾ ಸಂದರ್ಭಗಳಲ್ಲೂ ಸದರೀ ಜಮೀನು ಸಾಗುವಳಿ ಬಗ್ಯೆ ಕೊಡುವ ವಿಷಯದಲ್ಲಿ ನೆರೆ ಹೊರೆ ಗ್ರಾಮಸ್ತರ ಮತ್ತು ಫಾರೆಸ್ಟ್ ಇಲಾಖೆಯ ಹಕ್ಕುದಾರಿ ಮತ್ತು ಪ್ರಯೋಜನಗಳಿಗೆ ಅಭ್ಯಂತರವಿಲ್ಲವೆಂಬ ವಿಷಯದಲ್ಲಿ ಕ್ರಮವಾದ ವಿಚಾರಣೆಯು ನಡಿಸಲ್ಪಡತಕ್ಕದ್ದು.

IV ಸಾಧಾರಣವಾಗಿ 200 ಯಕರೆಗಳಿಗಿಂತಲೂ ಜಾಸ್ತೀ ವಿಸ್ತೀರ್ಣವುಳ್ಳ ಜಮೀನಿಗಾಗಿ ಯಾವ ದರಖಾಸ್ತೂ ಅಂಗೀಕರಿಸಲ್ಪಡಕೂಡದು. ಪರಂತು ದರಖಾಸ್ತುದಾರನು ಜಾಸ್ತೀ ಬೀಜವರಿವುಳ್ಳ ಜಮೀನನ್ನು ನ್ಯಾಯವಾದ ವಾಯಿದೆ ಒಳಗೆ ಸಾಗುವಳೀ ಮಾಡುವದಕ್ಕೆ ಶಕ್ತನೆಂಬದಾಗಿ ಡೆಪ್ಯೂಟಿ ಕಮ್ಮಿಷನರವರು ತೃಪ್ತಿಪಡುವಂಥಾ ವಿಶೇಷ ಸಂದರ್ಭಗಳಲ್ಲಿ ಅವರಿಗೆ ಯುಕ್ತತೋರುವಷ್ಟು ವಿಸ್ತೀರ್ಣವುಳ್ಳ ಜಮೀನಿಗೋಸ್ಕರ ದರಖಾಸ್ತು ಅಂಗೀಕರಿಸಲ್ಪಡಬಹುದು.

V. ಅಮೌಲ್ಯವಾದ ವಿಶೇಷ ಮರಗಳು ಯಿದ್ದು ಅವುಗಳು ಫಾರೆಸ್ಟ್ ಇಲಾಖೆ ಮುಖಾಂತ್ರ ಕಾಪಾಡಲ್ಪಟ್ಟು ಅಭಿವೃದ್ಧಿ ಮಾಡಲ್ಪಡಬೇಕೆಂದು ಗವರ್ಮೆಂಟಿನವರು ಅಭಿಪ್ರಾಯ ಪಡುವಂಥಾ ಯಾವ ಜಮೀನೇ ಆಗಲೀ ಕಾಫೀ ಸಾಗುವಳೀ ಬಗ್ಗೆ ಯಾವಾಗ್ಯೂ ಕೊಡಲ್ಪಡಕೂಡದು.

VI. ದರಖಾಸ್ತು ಮಾಡಲ್ಪಟ್ಟ ಜಮೀನು ಕೊಡಲ್ಪಡುವ ಬಗ್ಗೆ ಯಾವ ಅಭ್ಯಂತರವೂ ಯಿಲ್ಲವೆಂಬದಾಗಿ ವಿಚಾರಣೆ ಮೂಲಕ ತಿಳಿಯಬಂದಾಗ, ಅದು ಡಿಮಾರ್ಕೇಟ್ ಯಾನೆ ಹದ್ದು ಮಾಡಲ್ಪಟ್ಟು ಇದರಡಿ ಗೊತ್ತು ಮಾಡಲ್ಪಟ್ಟ ಸರ್ಕಾರ್ ಸವಾಲಿಗೆ ಒಳಪಟ್ಟು ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡತಕ್ಕದ್ದು.

ದರಯಕರೆ ವಂದಕ್ಕೆ ಹತ್ತು ರೂಪಾಯಿ ಪ್ರಕಾರ.

1. ಹಾಸನ ಡಿಸ್ಟ್ರಿಕ್ಟ್ ಮುಳಿ.
2. ಕಡೂರು ಡಿಸ್ಟ್ರಿಕ್ಟ್‌ನ ಕಡೂರು ಮತ್ತು ತರೀಕೆರೆ ತಾಲ್ಲೂಕುಗಳಲ್ಲಿ.
3. ಖಾಂಡ್ಯ ವ ಜಾಗರ ಮಾಗಣಿಗಳ ವಿನಾ ಚಿಕ್ಕಮಗಳೂರು ತಾಲ್ಲೂಕಿನಲ್ಲಿ.
4. ಕಳಸಾ (ಮೂವಿನಕೆರೆ) ವ ಸಂಕೆ ಮಾಗಣಿಗಳು ವತ್ತು ಭದ್ರಾನದಿಯ ಕೊರಕಲು ವಿನಾ ಮೂಡಿಗೆರೆ ತಾಲ್ಲೂಕಿನಲ್ಲಿ.

ದರಯಕರೆ ವಂದಕ್ಕೆ ಐದು ರೂಪಾಯಿ ಪ್ರಕಾರ.

1. ಚಿಕ್ಕಮಗಳೂರು ತಾಲ್ಲೂಕು ಖಾಂಡ್ಯ ವ ಜಾಗರ ಮಾಗಣಿಗಳಲ್ಲಿ.
2. ಮೂಡಗೆರೆ ತಾಲ್ಲೂಕು ಕಳಸ(ಮೂವಿನಕೆರೆ) ವ ಸಂಕೆ ಮಾಗಣಿಗಳಲ್ಲೂ ಮತ್ತು ಭದ್ರಾನದಿ ಕೊರಕಲು ಸುದಾ
3. ಕೊಪ್ಪಾ ತಾಲ್ಲೂಕಿನಲ್ಲಿ, ಯಡೆಪಳ್ಳಿ ಸಬ್ ಡಿವೀರ್ಜ ನೇಖೀಲ್.

VII. ಮೇಲೆ ಗೊತ್ತು ಮಾಡಲ್ಪಟ್ಟಂತೆ ಸರ್ಕಾರ್ ಸವಾಲ್‌ವೊಬಲಗಿನಲ್ಲಿ ಸರ್ವೆ ಖರ್ಚುಗಳು ಮತ್ತು ಗವರ್ಮೆಂಟಿಗೆ ಯಾವಾಗ್ಯೂ ನಿರಾತಂಕವಾಗಿ ಉಳಿಸಿಕೊಳ್ಳಲ್ಪಟ್ಟ ಸಂದಲ್ ಮರಗಳು ಅಲ್ಲದೆ ಮತ್ತು ಇತರ ತಮಾಂಮನ್ನಾಜಾತಿ ಮರಗಳ ವಿಷಯದಲ್ಲಿ ಗವರ್ಮೆಂಟಿಗೆ ಇರುವ ಹಕ್ಕುದಾರಿಯು ಸುದಾ ಅಡಗಿಸತಕ್ಕದ್ದು.

VIII. ಜಮೀನು ಹರಾಜ್ ಮಾಡಲು ಪ್ರಸಿದ್ಧಪಡಿಸುವದಕ್ಕೆ ಮುಂಚಿತವಾಗಿ ದರಖಾಸ್ತುದಾರನು ಮೇಲೆ ಗೊತ್ತು ಮಾಡಲ್ಪಟ್ಟ ಸರ್ಕಾರ್ ಸವಾಲ್ ವೊಬಲಗಿನ ನಾಲ್ಕರಲ್ಲಿ ಒಂದು ಭಾಗವನ್ನು ಡೆಪ್ಯೂಟಿ ಕಮ್ಮಿಷನರವರಲ್ಲಿ ಠೇವಣಿ ಇಡತಕ್ಕದ್ದು.

IX. ಉದ್ದೇಶಿಸಲ್ಪಟ್ಟ ತಮಾಂ ಪ್ರರೋಖ್ತುಗಳ ಪೂರಾ ನೋಟಿಸುಗಳು ಸೆರೆಹೊರೆ ಗ್ರಾಮಗಳಲ್ಲಿ ಥಾಯಿಷ್ಕಾಡಲ್ಪಡತಕ್ಕದ್ದು. ಮತ್ತು 50 ಎಕರೆಗಳಿಗಿಂತ ಜಾಸ್ತಿ ವಿಸ್ತೀರ್ಣವುಳ್ಳ ಪ್ರದೇಶಗಳ ತಮಾಂ ಪ್ರರೋಖ್ತುಗಳೂ ಸರ್ಕಾರ್ ಗೆಜಟಿನಲ್ಲಿ ಪ್ರಕಟಿಸುವದರ ಮೂಲಕ ಪ್ರಸಿದ್ಧಪಡಿಸಲ್ಪಡತಕ್ಕದ್ದು.

X. ಸದರೀ ಹರಾಜ್ ಜಾರೀಲಿರುವ ಷರತ್ತುಗಳನುಸರಿಸಿ ಬಹಿರಂಗವಾಗಿ ನಡಿಸಲ್ಪಡತಕ್ಕದ್ದು, ಮತ್ತು ಗೊತ್ತು ಮಾಡಲ್ಪಟ್ಟ ಸರ್ಕಾರ್ ಸವಾಲ್ ವೊಬಲಗಿಗೆ ಮೇಲ್ಪಟ್ಟ ಚಡದರಖಾಸ್ತುದಾರನಿಗೆ ಜಮೀನು ವಿಕ್ರಯಿಸಲ್ಪಡತಕ್ಕದ್ದು. ದರಖಾಸ್ತುದಾರನಿಂದ ಠೇವಣಿ ಇಡಲ್ಪಟ್ಟ ಸರ್ಕಾರ್ ಸವಾಲ್ ವೊಬಲಗಿನ ನಾಲ್ಕರಲ್ಲಿ ಒಂದು ಭಾಗದ ವೊಬಲಗು ಸದರೀ ಜಮೀನು ದರಖಾಸ್ತುದಾರನಿಗೆ ಹರಾಜಿನಲ್ಲಿ ವಿಕ್ರಯಿಸಲ್ಪಟ್ಟರೆ ಪ್ರರೋಖ್ತು ವೊಬಲಗಿಗೋಸ್ಕರ ಶೇಕಡಾ 25ರ ಪ್ರಕಾರ ಕೊಡಬೇಕಾದ ವೊಬಲಗಿಗೋಸ್ಕರ ಜಮೆ ಕಟ್ಟಲ್ಪಡತಕ್ಕದ್ದು, ಮತ್ತು ಸದರೀ ಜಮೀನು ಯಾವ ಇತರ ಯಾರಿಂದಲಾಗಲಿ ಕೊಂಡುಕೊಳ್ಳಲ್ಪಟ್ಟರೆ ಸದರೀ ವೊಬಲಗು ಡಿಪಾಜಿಟ್‌ದಾರನಿಗೆ ವಾಪಸ್ ಮಾಡಲ್ಪಡತಕ್ಕದ್ದು.

XI. ಮೇಲ್ಕಂಡ ರೂಲ್ಸ್ ಪ್ರಕಾರ ಪ್ರರೋಖ್ತು ಮಾಡಲ್ಪಟ್ಟ ಜಮೀನುಗಳಿಗೆ ಮೊದಲ್ ಮೂರು ವರುಷಗಳ ಪರಿಯಂತ ಯಾವ ಕಂದಾಯವೂ ತೆರಬೇಕಾದ್ದಿಲ್ಲವು; ತರುವಾಯ ಯರಡು ವರುಷಗಳಿಗೆ ಅರ್ಧಕಂದಾಯ ವಸೂಲ್ ಮಾಡಲ್ಪಡತಕ್ಕದ್ದು. ಆರನೇ ವರುಷದಾರಭ್ಯ ಪೂರಾ ಕಂದಾಯ ವಸೂಲ್ ಮಾಡಲ್ಪಡತಕ್ಕದ್ದು. ಪರಂತು ಈ ರಿಯಾಯತಿ ತೋರಿಸುವದಕ್ಕೆ ಮುಂಚಿತವಾಗಿ, ದರಖಾಸ್ತುದಾರನು, ಸದರೀ ಜಮೀನಿನಲ್ಲಿರತಕ್ಕ ಮರಗಳು ಕಡದ ತರುವಾಯ ಯಾ ಅದರ ಯಾವ ಭಾಗವನ್ನಾಗಲಿ ಅನ್ಯಥಾ ಬೈಲು ಮಾಡಿದನಂತರ ಸದರೀ ಜಮೀನಿನಲ್ಲಿ ಅಡಗಿ ಯಿರತಕ್ಕ ಸಾಗುವಳೀ ಲಾಯಖ್ ಭೂಗವನ್ನು ಸಾಗುವಳೀ ಮಾಡುವದಕ್ಕೆ ವಾಸ್ತವ್ಯವಾಗಿ ಪ್ರಯತ್ನ ಪಡದೆ ಸದರೀ ಜಮೀನನ್ನು ರಾಜೀನಾಮೆ ಮೂಲಕ ಒಪ್ಪಿಸಿ ಬಿಡುವ ಪಕ್ಷದಲ್ಲಿ ಮೊದಲ್ ವರುಷದ ಲಾಗಾಯ್ತು ಪೂರಾ ಕಂದಾಯ ಕೊಡುವದಕ್ಕೆ ಬದ್ಧನಾಗಿ ಮುಚ್ಚಲಿಕೆ ಬರೆದು ಕೊಡತಕ್ಕದ್ದು.

ಕ್ಯಾಂಪ್ ನಂ. 1782.—ಹಿರಿಯೂರು ತಾಲ್ಲೂಕು ಅಮಲ್ದಾರ್ ಮೀರ್ ಕಮಾಲುದ್ದೀನ್ ಅಲ್ಲೀಖಾರಿಗೆ, ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಯರಡು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 10ನೇ ಮಾರ್ಚೀ 1887.

ಕ್ಯಾಂಪ್ ನಂ. 1783.—ಚಿತ್ರದುರ್ಗದ ಪೊಲೀಸ್ ಆಸಿಸ್ಟೆಂಟ್ ಕಮ್ಮಿಷನರ್ ಮೆ॥ ಯ್ಯ. ನರಸಿಹ್ಮಯ್ಯಂಗಾರ್ರಿಗೆ, 1887ನೇ ಇಸವಿ ಏಪ್ರಿಲ್ 5ನೇ ಮುಕ್ತಂ ಲಗಾಯತು ಯಾ ಅವರು ಉಪಯೋಗಿಸಿಕೊಂಡ ತಾರೀಖು ಮೊದಲು ಎಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಜನರಲ್ ಆಸಿಸ್ಟೆಂಟ್ ಕಮ್ಮಿಷನರ್ ಮೆ॥ ರಘುನಾಥರಾಯರು, ಮೆ॥ ಯ್ಯ. ನರಸಿಹ್ಮಯ್ಯಂಗಾರ್ರು ಗೈರ್ ಹಾಜರೀಯಲ್ಲಿ ಯಾ ಮತ್ತೊಂದು ಹುಕ್ಕುಂ ಕೊಡುವ ಪರಿಯಂತ ಅವರ ಉದ್ಯೋಗದೊಡನೆ ಪೊಲೀಸ್ ಇಲಾಖಾ ಚಾರ್ಜನ್ನೂ ವಹಿಸಿರತಕ್ಕದ್ದು.

ಕ್ಯಾಂಪ್ ನಂ. 1787.—ಚಳ್ಳಕೆರೆ ಅಮಲ್ದಾರ್ ಯಸ್. ವೆಂಕಟರಾಯರಿಗೆ, ಅವರು ಉಪಯೋಗಿಸಿಕೊಳ್ಳುವ ತಾರೀಖು ಲಗಾಯತು ಯರಡು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಕ್ಯಾಂಪ್ ನಂ. 1788.—ಬೆಂಗಳೂರು ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಕಮ್ಮಿಷನರ್ ಮೆ॥ ಯಸ್. ಹೆಚ್. ವಾರ್ಡ್ಯರವರಿಗೆ, 1882ನೇ ಇಸವಿ Xನೇ ನಂಬರ್ ಆಕ್ಟಿನ 12ನೇ ಸೆಕ್ಷನ್ ಅರ್ಥರೀತ್ಯಾ ಯರಡನೇ ಕ್ಲಾಸ್ ಮಾಜಿಸ್ಟ್ರೇಟ್ ಅಧಿಕಾರಗಳು ಕೊಡಲ್ಪಟ್ಟಿರುತ್ತೆ.

ಕ್ಯಾಂಪ್ ನಂ. 1793.—ಕಡೂರು ಡಿಸ್ಟ್ರಿಕ್ಟ್ ಮೂಡಗೆರೆ ತಾಲ್ಲೂಕು ಅಮಲ್ದಾರ್ ಕಂಠೀರವಾಚಾರ್ರಿಗೆ, ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಮೂರು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಕ್ಯಾಂಪ್ ನಂ. 1849.—ಮೈಸೂರು ದೇಶದ ಇನ್ಸ್ಪೆಕ್ಟರ್ ಜನರಲ್‌ಯವರಿಂದ 1877ನೇ ಇಸವಿ IIIನೇ ನಂಬರ್ ರಿಜಿಸ್ಟ್ರೇಷನ್ ಆಕ್ಟಿನ 69ನೇ ಸೆಕ್ಷನ್ ಅನುಸರಿಸಿ ಮಾಡಲ್ಪಟ್ಟ ರಿಜಿಸ್ಟ್ರೇಷನ್ ರೂಲ್‌ಸಿನ 84ನೇ ಕಲಮಿಗೆ ಶೇರಿಸಲ್ಪಡಬೇಕಾದ ಜಾಸ್ತಿ ಅಂಶವು ಮಂಜೂರ್ಮಾಡಲ್ಪಟ್ಟು ಸರ್ವರ ತಿಳುವಳಿಕೆಯ ಬಗ್ಗೆ ಪ್ರಕಟಿಸಲ್ಪಡುತ್ತೆ:—

84 A. ವೋದಿನೋಡಿಕೊಳ್ಳುವ ಬಗ್ಯೂ ಕಾಪಿ ಬಾಯಿಷ್ ಬಗ್ಯೂ ಕೊಡಲ್ಪಡುವ ತಮಾಂ ದರಖಾಸ್ತುಗಳೂ ಬರಹದಲ್ಲಿರತಕ್ಕವು.

84 B. ಸದರೀ ದರಖಾಸ್ತಿನ ಮೇಲೆ, ಅದು ಹಾಜರ್ಮಾಡಲ್ಪಟ್ಟ ತಾರೀಖು, ದರಖಾಸ್ತಿನಲ್ಲಿ ಕಂಡ ಅಂಶ ಜಾರೀಮಾಡಲ್ಪಟ್ಟ ತಾರೀಖು ಮತ್ತು ವಿಧ ಮತ್ತು ಆಬಗ್ಯಾಗಿ ವಸೂಲ್ಮಾಡಲ್ಪಟ್ಟ ಫೀಜ್ ಮೊಬಲಗಿನ ಮೊತ್ತ ಇವುಗಳು ಬರೆಯಲ್ಪಡತಕ್ಕದ್ದು. ತರುವಾಯ ಸದರೀದ ದರಖಾಸ್ತು ಜಂಜರ್ ನಂಬರ್ ಹಾಕಲ್ಪಟ್ಟು ಫೈಲ್ ಮಾಡಲ್ಪಡತಕ್ಕದ್ದು.

84 C. ದರಖಾಸ್ತ್ ಪ್ರಕಾರ ಜಾರೀಮಾಡಲ್ಪಡದಿದ್ದರೆ, ಹಾಂಗೆ ಜಾರಿಮಾಡದೆ ಇರುವ ಬಗ್ಯೆ ಉಂಟಾದ ಕಾರಣಗಳು ಸದರೀ ದರಖಾಸ್ತಿನ ಮೇಲೆ ಇಂಡಾರಸ್ ಮಾಡಲ್ಪಡತಕ್ಕದ್ದು. ಅಂಥಾ ಕಾರಣಗಳ ನಕಲು ದರಖಾಸ್ತುದಾರನಿಗೆ ಬಗರ್ ಚಾರ್ಜ್ ಕೊಡಲ್ಪಡತಕ್ಕದ್ದು.

ಕ್ಯಾಂಪ್ ನಂ. 1826.—ಕಡೂರು ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟರವರ ಶಿಫಾರಸಿನ ಮೇಲೆ ದಿರ್ವಾರವರು, ಕಾಫಿ ಪ್ಲಾಂಟರುಗಳಾದ ರಸೂಲ್‌ಖಾ ಸಾಹೆಬ್ ಮತ್ತು ಮೆ॥ ಎಂ. ನೋರೋನಾ ಯವರನ್ನು ಇಂಡಿಯನ್ ಆರಂಸ್ ಆಕ್ಟಿನ 13,14,15 ವ 16ನೇ ಸೆಕ್ಷನ್‌ಗಳಲ್ಲಿ ಅಡಗಿ ಇರತಕ್ಕ ನಿರೋಧಗಳು ಮತ್ತು ಹುಕ್ಕುಂಗಳ ಅಮಲ್ ಚಲಾವಣಿ ದೆಶೆಯಿಂದ ವಿನಾಯಿಸಿರುತ್ತಾರೆ.

ತಾರೀಖು 12ನೇ ಮಾರ್ಚೀ 1887.

ಕ್ಯಾಂಪ್ ನಂ. 1915.—ಚಿತ್ರದುರ್ಗ ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರ್ ಇನ್ಸ್ಪೆಕ್ಟರ್ ಸಿ. ಶೇಷಾದ್ರೈಯಂಗಾರ್ರಿಗೆ, ಮಿಸ್ಟರ್ ಕಮಾಲುದ್ದೀನ್ ಅಲ್ಲೀಖಾನರು ರಜಾದ ಮೇಲಿರುವಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಹಿರಿಯೂರು ತಾಲ್ಲೂಕು ಅಮಲ್ದಾರ್ ವ ಮೊರನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡುವಂತೆ ಮೊಕರರ್ ಮಾಡಲ್ಪಟ್ಟಿರುತ್ತೆ.

ಕ್ಯಾಂಪ್ ನಂ. 1919.—ಕಡೂರು ಡಿಸ್ಟ್ರಿಕ್ಟ್ ಡೆಪ್ಯೂಟಿ ಕಮ್ಮಿಷನರವರ ಆಫೀಸ್ ರೆವಿನ್ಯು ಶಿರಸ್ತೇದಾರ್ ವೆಂಕಟವರದಯ್ಯಂಗಾರ್ರು, ಕಂಠೀರವಾಚಾರ್ರುಯವರು ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕ್ಕುಂ ಕೊಡುವ ಪರಿಯಂತ ಮೂಡಗೆರೆ ತಾಲ್ಲೂಕು ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡುವಂತೆ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ತಾರೀಖು 14ನೇ ಮಾರ್ಚೀ 1887.

ಕ್ಯಾಂಪ್ ನಂ. 1912.—ಹುಳಿಯಾರದ ಡೆಪ್ಯುಟಿ ಅಮಲ್ದಾರ್ ವಿ. ಸೀತಾರಾಮಯ್ಯನವರಿಗೆ, ಸೂಹೆ ಮಜಕೂರ್ 20ನೇ ಮುಕ್ತಂ ಲಾಗಾಯತು ಯಾ ಅವರು ಉಪಯೋಗಿಸಿಕೊಂಡ ತಾರೀಖು ಮೊದಲು 15 ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ. ಸದರೀಯವರ ಗೈರ್ ಹಾಜರೀಯಲ್ಲಿ ಚಿಕ್ಕನಾಯಕನಹಳ್ಳಿ ಅಮಲ್ದಾರ್ರು ಸದರೀ ಸಬ್ ಡಿವೀಜನಿನ ಚಾರ್ಜ್ ವಹಿಸಿರತಕ್ಕದ್ದು.

ಕ್ಯಾಂಪ್ ನಂ. 1917.—ಚಿತ್ರದುರ್ಗದ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರ್ ಆಫೀಸ್ ಹೆಡ್ ಅಕೌಂಟೆಂಟ್ ಸಿ. ಆರ್. ಚವಡಯ್ಯನವರಿಗೆ, ವೆಂಕಟರಾಯರು ರಜಾದಮೇಲಿರುವಲ್ಲಿ ಯಾ ಮತ್ತೊಂದು ಹುಕ್ಕುಂ ಕೊಡುವ ಪರಿಯಂತ, ಕಳ್ಳಕೆರೆ ತಾಲ್ಲೂಕು ಅಮಲ್ದಾರ್ ವ ಮೂರನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಕೆಲಸನೋಡುವಂತೆ ವೊಕರರ್ ನೂಡಲ್ಪಟ್ಟಿರುತ್ತೆ.

ಹುಕ್ಕುಂ ಬವೋಜೀವ್,
ಆರ್. ವಿಜಯೀಂದ್ರರಾವ್,
ಜೀಫ್ ಸೆಕ್ರೆಟೇರಿ.